# ಬೆಂಗಳೂರು ವಿಶ್ವವಿದ್ಯಾಲಯ

## ಅಂಚೆ ತೆರಪು ಹಾಗೂ ದೂರ ಶಿಕ್ಷಣ ನಿರ್ದೇಶನಾಲಯ

ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 560 056

**ನಂ. ಡಿ.ಸಿ.ಸಿ&ಡಿ.ಇ/ಜಾಹಿರಾತು/2017–18**

**ದಿನಾಂಕ: 05/02/2018**

## ದಾಖಲಾತಿ ಅಧಿಸೂಚನೆ

2017–18 ನೇ ಸಾಲಿನ ಶೈಕ್ಷಣಿಕ ವರ್ಷದ ಅಂಚೆ ತೆರಪು ಹಾಗೂ ದೂರ ಶಿಕ್ಷಣದ ಮುಕ್ತ ವಿಶ್ವವಿದ್ಯಾಲಯ ಯೋಜನೆಗಳಡಿ ವಿವಿಧ ಕೋರ್ಸ್‌ಗಳ ದ್ವಿತೀಯ ಮತ್ತು ತೃತೀಯ ವರ್ಷದ ಸ್ನಾತಕ ಮತ್ತು ದ್ವಿತೀಯ ಸ್ನಾತಕೋತ್ತರ, ಕೋರ್ಸುಗಳಿಗೆ ದಾಖಲಾತಿಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

i) ದ್ವಿತೀಯ ಮತ್ತು ತೃತೀಯ ಬಿ.ಎ (ಕನ್ನಡ/ಆಂಗ್ಲ ಮಾಧ್ಯಮ) ಅಂಚೆ ತೆರಪು ಮತ್ತು ಮುಕ್ತ ವಿಶ್ವವಿದ್ಯಾಲಯ ಯೋಜನೆ.

ii) ದ್ವಿತೀಯ ಮತ್ತು ತೃತೀಯ ಬಿ.ಕಾಂ (ಆಂಗ್ಲ ಮಾಧ್ಯಮ ಮಾತ್ರ) ಅಂಚೆ ತೆರಪು ಮತ್ತು ಮುಕ್ತ ವಿಶ್ವವಿದ್ಯಾಲಯ ಯೋಜನೆ.

iii) ದ್ವಿತೀಯ ಮತ್ತು ತೃತೀಯ ಬಿ.ಬಿ.ಎಂ (ಆಂಗ್ಲ ಮಾಧ್ಯಮ ಮಾತ್ರ) ಅಂಚೆ ತೆರಪು ಮತ್ತು ಮುಕ್ತ ವಿಶ್ವವಿದ್ಯಾಲಯ ಯೋಜನೆ.

iv) ದ್ವಿತೀಯ ಎಂ.ಎ : ಕನ್ನಡ, ಇಂಗ್ಲೀಷ್, ಹಿಂದಿ, *ತೆಲುಗು ಮತ್ತು *ಉರ್ದು

v) ದ್ವಿತೀಯ ಎಂ.ಎ : ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ (ಕನ್ನಡ/ಆಂಗ್ಲ ಮಾಧ್ಯಮ) *ತತ್ವಶಾಸ್ತ್ರ (ಆಂಗ್ಲ ಮಾಧ್ಯಮ) – ಅಂಚೆ ತೆರಪು ಯೋಜನೆ ಮಾತ್ರ

vi) ದ್ವಿತೀಯ ಎಂ.ಎ – *ಸಂಸ್ಕೃತ ಮತ್ತು ಫ್ರೆಂಚ್ – ಬಾಹ್ಯ ಯೋಜನೆ

vii) ದ್ವಿತೀಯ ಎಂ.ಕಾಂ : (ಆಂಗ್ಲ ಮಾಧ್ಯಮ)

viii) ದ್ವಿತೀಯ ಎಂ.ಎಸ್ಸಿ (ಗಣಿತ) : (ಆಂಗ್ಲ ಮಾಧ್ಯಮ)

**ಸೂಚನೆ:–** 1. ಕೋರ್ಸ್‌ಗಳ ವಿವರ ಮತ್ತು ಅರ್ಹತಾ ನಿಯಮ/ಶುಲ್ಕಗಳ ವಿವರ ಮತ್ತು ಅಗತ್ಯವಾದ ಮಾಹಿತಿಗಳನ್ನು ಅಂತರ್ಜಾಲ, (ಆನ್‌ಲೈನ್) ವೆಬ್‌ಸೈಟ್ ವಿಳಾಸ **www.dccbub.in** ರಲ್ಲಿ ಪಡೆಯಬಹುದಾಗಿದೆ.

2. **ಪ್ರವೇಶ ಕೈಪಿಡಿ ಹಾಗೂ ಅರ್ಜಿಗಳನ್ನು ಖರೀದಿಸುವ ಮತ್ತು ಸಲ್ಲಿಸುವ ವಿಧಾನ:** ಪ್ರವೇಶ ಕೈಪಿಡಿಯ ಸಹಿತ ಅರ್ಜಿಗಳನ್ನು ನಿಗದಿತ ಶುಲ್ಕ ರೂ. 550/– ಅನ್ನು ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ರವರ ಹೆಸರಿನಲ್ಲಿ ಪಡೆದ ಬ್ಯಾಂಕ್ ಡಿಮ್ಯಂಡ್ ಡ್ರಾಫ್ಟ್‌ನ್ನು ವಿತ್ತಾಧಿಕಾರಿಗಳ ಕಛೇರಿ, ಜ್ಞಾನಭಾರತಿ ಆವರಣ, ಬೆಂಗಳೂರ ವಿಶ್ವವಿದ್ಯಾಲಯ, ಬೆಂಗಳೂರು – 560056 ರವರಿಗೆ ಅವರಿಂದ ಪಡೆದ ರಸೀದಿಯನ್ನು ಸಲ್ಲಿಸಿ, ಅಂಚೆ ತೆರಪು ಹಾಗೂ ದೂರ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಪಡೆಯಬಹುದು.

**ಅಥವಾ**

ಅರ್ಜಿಗಳನ್ನು ಅಂತರ್ಜಾಲ ವೆಬ್‌ಸೈಟ್ ವಿಳಾಸ ***www.dccbub.in*** ಇಲ್ಲಿಂದ ಡೌನ್ ಲೋಡ್ ಮಾಡಿದ ಅಭ್ಯರ್ಥಿಗಳು ನಿಗದಿತ ಅರ್ಜಿಗಳನ್ನು ಸಲ್ಲಿಸುವಾಗ ಅರ್ಜಿ ಮತ್ತು ಕೈಪಿಡಿಯ ಶುಲ್ಕ ರೂ. 550/- ಅನ್ನು ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ರವರ ಹೆಸರಿನಲ್ಲಿ ಪಡೆದ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್‌ನ್ನು ಸಲ್ಲಿಸಿ, ಪ್ರವೇಶ ಕೈಪಿಡಿಯನ್ನು ಅಂಚೆ ತೆರಪು ಹಾಗೂ ದೂರ ಶಿಕ್ಷಣ ನಿರ್ದೇಶನಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 560056 ಇಲ್ಲಿ ಪಡೆಯಬಹುದು.

**ಅಥವಾ**

ಅಭ್ಯರ್ಥಿಗಳು ಅರ್ಜಿ ಮತ್ತು ಪ್ರವೇಶ ಕೈಪಿಡಿಯನ್ನು ಅಂಚೆ ಮೂಲಕ ಪಡೆಯಲು ಇಚ್ಛಿಸಿದಲ್ಲಿ, ಅವರುಗಳು ಒಂದು ಸ್ವವಿಳಾಸ ಇರುವ 30 ಸೆ.ಮೀ X 25 ಸೆಂ.ಮೀ ಅಳತೆಯ ಲಕೋಟೆಯನ್ನು ನಿರ್ದೇಶಕರು, ಅಂಚೆ ತೆರಪು ಹಾಗೂ ದೂರ ಶಿಕ್ಷಣ ನಿರ್ದೇಶನಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 560056 ಇವರಿಗೆ ಅಂಚೆ ಚೀಟಿಗಳುಳ್ಳ ಲಕೋಟೆಯೊಂದಿಗೆ ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ರವರ ಹೆಸರಿನಲ್ಲಿ ಪಡೆದ ರೂ. 550/- ರ ಬ್ಯಾಂಕ್‌ನ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಕಳುಹಿಸಿ ಪಡೆಯಬಹುದು. ಈ ರೀತಿಯ ಮನವಿಗಳು ನಿಗದಿಪಡಿಸಿದ ದಿನಾಂಕಕ್ಕಿಂತ ಸಾಕಷ್ಟು ಮುಂಚಿತವಾಗಿ ತಲುಪಿಸಬೇಕು.

3) ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ದಾಖಲೆಗಳೊಂದಿಗೆ ಅರ್ಜಿ ಶುಲ್ಕದ ರಸೀತಿ ಪ್ರತಿಯನ್ನು ಒಳಗೊಂಡಂತೆ ನಿಗದಿತ ದಿನಾಂಕದೊಳಗೆ ಅಂಚೆ ತೆರಪು ಹಾಗೂ ದೂರ ಶಿಕ್ಷಣ ನಿರ್ದೇಶನಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 560056 ಇಲ್ಲಿಗೆ ಸಲ್ಲಿಸುವುದು.

**ದಾಖಲಾತಿ ಅರ್ಜಿಗಳನ್ನು ನೀಡುವ ಮತ್ತು ಸ್ವೀಕರಿಸುವ ಪ್ರಕಟಿತ ದಿನಾಂಕಗಳು:**

- **ಅರ್ಜಿ ಫಾರಂಗಳನ್ನು ವಿತರಿಸುವ ಕೊನೆಯ ದಿನಾಂಕ (ದಂಡವಿಲ್ಲದೆ) : 16/02/2018 ರಿಂದ 15/03/2018**
- **ಅರ್ಜಿ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ (ರೂ.200/- (ದಂಡ ಶುಲ್ಕದೊಂದಿಗೆ) : 16/03/2018 ರಿಂದ 31/03/2018**
- **ಭರ್ತಿ ಮಾಡಿದ ಅರ್ಜಿ ಫಾರಂಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ (ದಂಡವಿಲ್ಲದೆ) : 10/04/2018**

**ಈ ಅಧಿಸೂಚನೆಯು ಇತರ ಯಾವುದೇ ಅಧ್ಯಯನ ಕೇಂದ್ರಗಳಿಗೆ ಅನ್ವಯವಾಗುವುದಿಲ್ಲ**

**Sd/-**

**ಕುಲಸಚಿವರು**